# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006.

**ಆಡಳಿತ ವಿಭಾಗ**

ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/956/2019-20 ದಿನಾಂಕ:07.12.2019

## ದರಪಟ್ಟಿ ಆಹ್ವಾನ

**ವಿಷಯ :** ವಿಶ್ವವಿದ್ಯಾನಿಲಯವು ರಚಿಸಿರುವ ಅಧ್ಯಾದೇಶಗಳು ಮತ್ತು ಪರಿನಿಯಮಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಮತ್ತು ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಭಾಷಾಂತರ ಮಾಡಲು ನುರಿತ ಸಂಸ್ಥೆಗಳಿಂದ/ವ್ಯಕ್ತಿಗಳಿಂದ ದರಪಟ್ಟಿ ಆಹ್ವಾನಿಸಿರುವ ಬಗ್ಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 07.12.2019.

* * * * *

ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಅಧ್ಯಾದೇಶಗಳು ಮತ್ತು ಪರಿನಿಯಮಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಮತ್ತು ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಭಾಷಾಂತರ ಮಾಡಲು ನುರಿತ ಸಂಸ್ಥೆಗಳಿಂದ/ವ್ಯಕ್ತಿಗಳಿಂದ ಕೆಳಕಂಡ ಷರತ್ತಿಗೊಳಪಟ್ಟು ದರಪಟ್ಟಿ ಆಹ್ವಾನಿಸಲಾಗಿದೆ. ಈ ಸಂಬಂಧವಾಗಿ ದಿನಾಂಕ: 18.12.2019 ಸಾಯಂಕಾಲ 05.00 ಗಂಟೆಯೊಳಗಾಗಿ ಪ್ರತಿ ಹಾಳೆಯ ಭಾಷಾಂತರಕ್ಕೆ ತಗುಲುವ ಕನಿಷ್ಠ ದರವನ್ನು ನಮೂದಿಸಿ ಮೊಹರು ಮಾಡಿದ ಲಕೋಟೆಯ ಮೇಲೆ **"ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಅಧ್ಯಾದೇಶಗಳು ಮತ್ತು ಪರಿನಿಯಮಗಳನ್ನು ಭಾಷಾಂತರ ಮಾಡುವ ಬಗ್ಗೆ"** ಎಂಬ ಮೇಲ್ಬರಹದೊಂದಿಗೆ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು 570 006, ಇವರ ಕಚೇರಿಗೆ ತಲುಪಿಸುವುದು.

**ಷರತ್ತುಗಳು :**

1. ಭಾಷಾಂತರ ಕಾರ್ಯವನ್ನು ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಪೂರ್ಣಗೊಳಿಸಿ, ಹುಂಡಿಯ ಸಮೇತ ಸಲ್ಲಿಸುವುದು.
2. ದರಪಟ್ಟಿಯಲ್ಲಿನ ದರಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದು.
3. ಯಾವುದೇ ಕಾರಣ ನೀಡದೆ ಅರ್ಜಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
4. ತುಲನಾತ್ಮಕವಾಗಿ ಕಡಿಮೆ ದರವನ್ನು ನಮೂದಿಸುವ ಸಂಸ್ಥೆ/ವ್ಯಕ್ತಿಗಳಿಗೆ ಕಾರ್ಯಾದೇಶವನ್ನು ನೀಡಲಾಗುವುದು.
5. ಭಾಷಾಂತರ ಕಾರ್ಯವನ್ನು ಯಾವುದೇ ಲೋಪವಿಲ್ಲದಂತೆ ಮಾಡತಕ್ಕದ್ದು.
6. ಭಾಷಾಂತರಿಸಿದ ಅಧ್ಯಾದೇಶ/ಪರಿನಿಯಮಗಳ soft copy ಯನ್ನು ಕುಲಸಚಿವರ ಇ-ಮೇಲ್ ವಿಳಾಸ registrar@ksoumysore.edu.in ಗೆ ಕಳುಹಿಸತಕ್ಕದ್ದು ಮತ್ತು ಒಂದು hard copy ಯನ್ನು ನೀಡತಕ್ಕದ್ದು.
7. ಯಾವುದಾದರು ತಕರಾರು ಉದ್ಭವಿಸಿದರೆ ಮೈಸೂರು ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಆದೇಶದ ಮೇರೆಗೆ,

ಕುಲಸಚಿವ

Scanned by CamScanner